ಸಾಕ್ಷಿ ಯನ್ನು ದಿಃ 28.06.2024 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ  ವಾದಿ ಪರ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ಕೊಪ್ಪ ಗ್ರಾಮದ ಸ್ವತ್ತಿನ ಸಂ.75 ರ ನಮೂನೆ - 9 ನ್ನು (2 ಪುಟಗಳು) ನಿಪಿ - 1 ಎಂದು,
2. ಕೊಪ್ಪ ಗ್ರಾಮದ ಸ್ವತ್ತಿನ ಸಂ.75 ರ ನಮೂನೆ - 11 ಎ ನ್ನು (2 ಪುಟಗಳು) ನಿಪಿ - 2 ಎಂದು,
3. ದಿಃ 16.08.2016 ರಂದು ಕೃಷ್ಣಮೂರ್ತಿ ಹೆಚ್.ಎನ್. ಬಿನ್ ನರಸೇಗೌಡ ರವರಿಗೆ ಎನ್. ವಿಶ್ವನಾಥನ್ ರವರು ಬರೆದುಕೊಟ್ಟ ನಿವೇಶನದ ಶುದ್ಧ ಕ್ರಯಪತ್ರದ ನೋಟರೈಸ್ಡ್ ಪ್ರತಿಯನ್ನು ನಿಪಿ - 3 ಎಂದು,
4. 4 ಪೋಟೋಗಳನ್ನು ನಿಪಿ - 4 ರಿಂದ 7 ಎಂದು,
5. ಒಂದು ಸಿ.ಡಿಯನ್ನು ನಿಪಿ - 8 ಎಂದು,
6. 3 ಪೋಟೋಗಳನ್ನು ನಿಪಿ - 9 ರಿಂದ 11 ಎಂದು,
7. ಒಂದು ಸಿ.ಡಿಯನ್ನು ನಿಪಿ - 12 ಎಂದು,
8. ನಕಾಶೆಯ ದೃಢೀಕೃತ ಪ್ರತಿಯನ್ನು (2 ಪುಟಗಳು) ನಿಪಿ - 13 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ